

ಗುಲಾಮ ಮತ್ತು ಸಿಂಹ



ಎಂಡ್ರೋಕ್ಲಿಸ್ ಎಂಬ ಒಬ್ಬ ಗುಲಾಮನ ಈ ಕತೆ. ಅವನು ಬಹು ದಯಾಳು ಮತ್ತು ನಮ್ರನು. ಆದರೆ ಆತನಿಗೆ ತಾನು ಸ್ವತಂತ್ರವಾಗಿ ಜೀವಿಸಬೇಕೆಂಬ ಹಂಬಲವಿತ್ತು. ಒಂದು ದಿನ ತನ್ನ ಕ್ರೂರ ಒಡೆಯನ ಕೈಯಿಂದ ಪಾರಾಗಲೆಂದು ದಟ್ಟವಾಗಿರುವ ಅಡವಿಯಲ್ಲಿ ಓಡಿ ಹೋದನು.

ಅಡವಿಯಲ್ಲಿ ಆತನಿಗೆ ಗಾಯದಿಂದ ನರಳುತ್ತಿರುವ ಸಿಂಹ ಕಂಡಿತು. ಎಂಡ್ರೋಕ್ಲಿಸ್ ಸಿಂಹವನ್ನು ಕಂಡು ಗಾಬರಿಯಾದನು. ಆದರೆ ನರಳುತ್ತಿರುವ ಸಿಂಹವನ್ನು ನೋಡಿ ಆತನಿಗೆ ಅದರ ಮೇಲೆ ಕನಿಕರ ಉಂಟಾಯಿತು. ತನ್ನ ಅಂಜಿಕೆಯನ್ನು ಹತ್ತಿಕ್ಕಿ ಎಂಡ್ರೋಕ್ಲಿಸ್ ಆ ಅಡವಿಯಲ್ಲಿಯ ಕ್ರೂರ ಸಿಂಹಕ್ಕೆ ಸಹಾಯ ಮಾಡಿದನು. ಎಂಡ್ರೋಕ್ಲಿಸ್ ಮತ್ತು ಸಿಂಹದ ಈ ಕತೆ ಎಷ್ಟೋ ಅಂಜುಬುರುಕರಿಗೆ ಕೂಡ ಕನಿಕರ ಪಡಲು ಪ್ರೇರೇಪಿಸುತ್ತದೆ.

ಪಾಲ್ ಗೆಲ್ಡೋನ್   ಅಂದವಾದ ಚಿತ್ರಗಳಿಂದ ಈ ಕತೆಯನ್ನು ಸಿಂಗರಿಸಿದ್ದಾರೆ.



ಗುಲಾಮ
ಮತ್ತು
ಸಿಂಹ

ಕತೆ ಮತ್ತು ಚಿತ್ರಗಳು: ಪಾಲ್ ಗೆಲ್ಡೋನ್

ಕನ್ನಡಕ್ಕೆ: ಪ್ರಭಾಕರ ನಾನಾವಟಿ




ಒಂದಾನೊಂದು ಕಾಲದಲ್ಲಿ ಪುರಾತನ ರೋಮ ನಗರದಲ್ಲಿ ಎಂಡ್ರೋಕ್ಲಿಸ್ ಎಂಬ ಜೀತದ ಆಳು ಇರುತ್ತಿದ್ದನು. ಆತನ ಒಡೆಯ ಬಹಳ ಕ್ರೂರನಾಗಿದ್ದನು. ಒಡೆಯನ ಹಿಂಸೆ ತಾಳದೆ "ನನಗೆ ಸ್ವಾತಂತ್ರ್ಯ ಬೇಕು." ಎಂದು ಎಂಡ್ರೋಕ್ಲಿಸ್ ತನ್ನಷ್ಟಕ್ಕೆ ತಾನೇ ಮನದಲ್ಲಿ ಅಂದುಕೊಂಡನು. ಒಂದು ದಿನ ರಾತ್ರಿ ಎಲ್ಲರೂ ನಿದ್ದೆಯಲ್ಲಿದ್ದಾಗ ಆತನು ಅಡವಿಯ ದಿಸೆಯಲ್ಲಿ ಓಡಿ ಹೋದನು.

.



ಅವನು ಅಡವಿಯಲ್ಲಿ
ಯಾವದೇ ಪರಿವೆ ಇಲ್ಲದೆ
ಓಡುತ್ತಲೇ ಇದ್ದನು. ಆತನಿಗೆ
ಬಹು ದಣಿವಾಯಿತು.
ಅವನು ನಿಃಶಕ್ತನಾಗಿದ್ದನು.


ಆ ಅಡವಿಯಲ್ಲಿ
ಒಂದು ಸಿಂಹ
ನೋವಿನಿಂದಾಗಿ
ಬಹಳ
ನರಳುತ್ತಲಿತ್ತು.





ಎಂಡ್ರೋಕ್ಲಿಸ್ ಎದುರಿಗೆ ಕುಳಿತಿರುವ ಸಿಂಹವನ್ನು ಕಂಡು ಅಂಜಿಕೆಯಿಂದ ನಡುಗತೊಡಗಿದನು. ಮತ್ತು ರಭಸದಿಂದ ಓಡತೊಡಗಿದನು. ಆದರೆ ಸಿಂಹವು ಅವನ ಬೆನ್ನತ್ತಿ ಬರಲಿಲ್ಲ. ಸಿಂಹ ಮತ್ತಷ್ಟು ನೋವಿನಿಂದ ಕಣ್ಣೀರು ಇಡತೊಡಗಿತು. ಎಂಡ್ರೋಕ್ಲಿಸ್ ತಿರುಗಿ ನೋಡಿದಾಗ ಅದು ತನ್ನ ಜಾಗ ಬಿಟ್ಟು ಅಲುಗಾಡಲಿಲ್ಲವೆಂದು ಅವನಿಗೆ ಅನ್ನಿಸಿತು. ಮೆಲ್ಲ ಮೆಲ್ಲಗೆ ಸಿಂಹದ ಬಳಿ ಆತ ಬರತೊಡಗಿದನು.


ಆದರೂ ಸಿಂಹ ತನ್ನ ಜಾಗ ಬಿಟ್ಟು ಕದಲಲಿಲ್ಲ. ಸಿಂಹದ ಬಲಗೈಯ ಅಂಗೈಯಲ್ಲಿ ಮುಳ್ಳು ನಟ್ಟಿದ್ದರಿಂದ ರಕ್ತ ಹೊರಬೀಳುತ್ತಿದ್ದನ್ನು ಅವನು ನೋಡಿದನು. ಅದು ಸಾಕಷ್ಟು ಉಬ್ಬಿಕೊಂಡಿತ್ತು. ಮುಳ್ಳು ಸಾಕಷ್ಟು ಒಳಸೇರಿರಬಹುದು. ಇದರಿಂದಾಗಿ ಸಿಂಹಕ್ಕೆ ಸಾಕಷ್ಟು ನೋವಾಗುತಿರಬೇಕು.



ಎಂಡ್ರೋಕ್ಲಿಸ್ ತನ್ನ ಬೆರಳುಗಳಿಂದ ಮುಳ್ಳನ್ನು ಗಟ್ಟಿಯಾಗಿ ಹಿಡಿದು ಹೊರತೆಗೆಯುತ್ತಿದ್ದಾಗ ಸಿಂಹ ಜೋರುಜೋರಾಗಿ ಆರ್ಭಟೆ ಇಡತೊಡಗಿತು. ಎಂಡ್ರೋಕ್ಲಿಸ್ ಥರಥರ ನಡುಗತೊಡಗಿದನು. ಆದರೂ ಬಹಳ ಶಕ್ತಿ ಹಚ್ಚಿ ಮುಳ್ಳನ್ನು ಹೊರತೆಗೆದನು. ಒಂದೇ ಕ್ಷಣದಲ್ಲಿ ಮುಳ್ಳು ಹೊರಗೆ ಬಂದಿತು.



ಕೆಲ ಕ್ಷಣಗಳಲ್ಲಿಯೇ ಸಿಂಹ ಮೇಲೆದ್ದು ನಡೆಯುವಷ್ಟು ಶಕ್ತಿ ಗಳಿಸಿತು. ಎಂಡ್ರೋಕ್ಲಿಸ್ ಅಂಜುತ್ತ ಓಡತೊಡಗಿದನು. ಆದರೆ ಸಿಂಹ ಪ್ರೀತಿಯಿಂದ ನಾಯಿಯ ಹಾಗೆ ಬಾಲ ಅಲುಗಾಡಿಸತೊಡಗಿತು. ಸಿಂಹ ಮುಂದೆ ಬಂದು ಅವನ ಕೈಯನ್ನು ನೆಕ್ಕತೊಡಗಿತು. ಸಿಂಹ ಆತನನ್ನು ಸ್ವಲ್ಪ ನುಗಿಸಿತು. ಎಂಡ್ರೋಕ್ಲಿಸ್ ನಿಗೆ ಅದು ಹಿಂದೆ ಹಿಂದೆ ಬರಬೇಕೆಂದು ಸನ್ನೆ ಮಾಡಿದ ಹಾಗೆ ಕಂಡಿತು.



ಸ್ವಲ್ಪೇ ವೇಳೆಯಲ್ಲಿ ಅದು
ಎಂಡ್ರೋಕ್ಲಿಸ್ ನನ್ನು ತನ್ನ
ಗವಿಗೆ ಕರೆದುಕೊಂಡು
ಬಂದಿತು.

ಎಂಡ್ರೋಕ್ಲಿಸ್ ಬಹಳ ದಣಿದಿದ್ದನು.ಆದ್ದರಿಂದ ಗವಿ ಸೇರಿದ ಕ್ಷಣ ಅಲ್ಲಿಯೇ ನೆಲದ ಮೇಲೆ ಮಲಗಿ ಬಿಟ್ಟನು. ಇಲ್ಲಿ ಆತ ಬಹಳ ಸಂತೋಷದಿಂದ ದಿನಗಳೆಯತೊಡಗಿದನು. ಅವನಿಗೆ ಒಬ್ಬ ಒಳ್ಳೆಯ ಗೆಳೆಯ ಮತ್ತು ಹಾಯಾಗಿ ಮಲಗಲು ಸ್ಥಳ ದೊರೆತಿತ್ತು. ಸಿಂಹ ದಿನಾಲು ಅವನಿಗಾಗಿ ತಿನ್ನಲು ಮಾಂಸದ ತುಂಡುಗಳನ್ನು ತಂದು ಕೊಡುತ್ತಿತ್ತು. ಅವರಿಬ್ಬರೂ ಸಂತಸದಲ್ಲಿದ್ದರು. ಆದರೆ...





… ಒಂದು ದಿನ ಸಿಂಹ ಅಡವಿಯಲ್ಲಿ ಬೇಟೆಗೆ ಹೋದ ಸಮಯದಲ್ಲಿ ಅರಸನ ಸೈನಿಕರು ಗುಲಾಮನನ್ನು ಹುಡುಕಿ ಬಂಧಿಸಿಡಲು ಬಂದರು. ಅವರು ಎಂಡ್ರೋಕ್ಲಿಸ್ ಗವಿಯಲ್ಲಿ ಮಲಗಿದ್ದನ್ನು ಕಂಡರು.

ಸೈನಿಕರು ಅವನನ್ನು ಬಂಧಿಸಿ ಅರಮನೆಗೆ ತೆಗೆದುಕೊಂಡು ಹೋದರು.


ಆ ಕಾಲದಲ್ಲಿ ಬಂಧಿಸಿಟ್ಟ ಗುಲಾಮರನ್ನು ಹಸಿದಿದ್ದ ಸಿಂಹದ ಮುಂದೆ ಒಗೆಯುವ ಶಿಕ್ಷೆ ಕೊಡಲಾಗುತ್ತಿತ್ತು. ಒಂದು ಕ್ರೀಡಾಂಗಣದ ಸುತ್ತಲೂ ಕುಳಿತ ಸಾವಿರಾರು ಪ್ರೇಕ್ಷಕರ ಮನೋರಂಜನೆಗಾಗಿ ಗುಲಾಮ ಮತ್ತು ಹಸಿದಿದ್ದ ಸಿಂಹದ ನಡುವೆ ಈ ಕಾಳಗ ನಡೆಯುತ್ತಿತ್ತು.

ಸೈನಿಕರು ಎಂಡ್ರೋಕ್ಲಿಸ್ ನನ್ನು ಒಂದು ಕತ್ತಲೆ ಕೋಣೆಯಲ್ಲಿ ಇಟ್ಟಿದ್ದರು. ಎಂಡ್ರೋಕ್ಲಿಸ್ ತನ್ನ ಕೊನೆಯ ದಿನಗಳ ಎಣಿಕೆ ಮಾಡುತ್ತಲಿದ್ದನು.


ಒಂದು ಭಯಾನಕವಾಗಿ ಕಾಣುವ ಸಿಂಹವನ್ನು ಬಂಧಿಸಿದ ಪಂಜರನ್ನು ಬಯಲಲ್ಲಿ ತಂದು ಇಡಲಾಯಿತು. ಕಾಳಗದ ದಿನ ಎಂಡ್ರೋಕ್ಲಿಸ್ ನಿಗೆ ತಿನ್ನಲು ಏನೇನು ಕೊಟ್ಟಿರಲಿಲ್ಲ.

ಕತ್ತಲು ಕೋಣೆಯವರೆಗೆ ಸಿಂಹದ ಆರ್ಭಟೆ ಕೇಳಿಸುತ್ತಿತ್ತು. ಅದರ ಆರ್ಭಟೆಯನ್ನು ಕೇಳಿದಾಗ ಅದಕ್ಕೆ ಸಾಕಷ್ಟು ಹಸಿವೆಯಾಗಿದೆ ಎಂಬುದು ತಿಳಿಯುತ್ತಿತ್ತು.





ಕೊನೆಗೆ ಗುಲಾಮನ ಮತ್ತು ಸಿಂಹದ ನಡುವಿನ ಕಾಳಗದ ದಿನ ಬಂದು ಬಿಟ್ಟಿತು. ಮುಗಿಲಲ್ಲಿ ಸೂರ್ಯನು ಹೊಳೆಯುತ್ತಿದ್ದನು. ಎಂಡ್ರೋಕ್ಲಿಸ್ ನ ಕಣ್ಣುಗಳು ಕುಕ್ಕತೊಡಗಿದವು. ಆದ್ದರಿಂದ ಕಣ್ಣು ಮುಚ್ಚಿಯೇ ಆತ ಬಯಲಲ್ಲಿ ಕಾಲಿಡುತ್ತಿದ್ದನು. ಜನರ ಉತ್ಸಾಹ ಮತ್ತು ಸಪ್ಪಳದಿಂದಾಗಿ ಎಂಡ್ರೋಕ್ಲಿಸ್ ಅಂಜಿ ನಡುಗುತ್ತಲಿದ್ದನು




ಸಿಂಹಾಸನದ ಮೇಲೆ ಕುಳಿತಿದ್ದ ಅರಸ ಮತ್ತು ಆತನ ಮಂತ್ರಿಗಳು ನಗೆದಾಡುತ್ತ ಹರಟೆ ಹೊಡೆಯುತ್ತಿದ್ದರು. ಒಮ್ಮೆಲೆ ಅರಸ ಕೈ ಎತ್ತಿ ಸನ್ನೆ ಮಾಡಿದಾಗ ಜನರೆಲ್ಲ ಧ್ವನಿ ಮಾಡದೆ ಸುಮ್ಮನಾದರು. ಎಲ್ಲೆಡೆ ಶಾಂತತೆ ಹಬ್ಬಿತು.



ಸಿಂಹದ ಪಂಜರದ ಬಾಗಿಲನ್ನು
ತೆರೆದಾಗ ಸಿಂಹ ಆರ್ಭಟಿಸುತ್ತ
ಹೊರಗೆ ಜಿಗಿಯಿತು.


ಎಂಡ್ರೋಕ್ಲಿಸ್ ನ ಮೈ ನಡುಗತೊಡಗಿತು.
ಎಲ್ಲಿಯೂ ಓಡಿ ಹೋಗಲು ಶಕ್ಯವಿರಲಿಲ್ಲ.
ಅಡಗಿಕೊಳ್ಳಲು ಜಾಗವಿರಲಿಲ್ಲ. ಸಿಂಹವು
ಸುತ್ತಲೂ ಒಮ್ಮೆ ನೋಡಿ ಇವನ ಮೇಲೆ ಹಾರಿತು.
" ನನ್ನ ಕೊನೆ ಬಂದಂತೆಯೇ" ಎಂದು ಆತ
ಆಲೋಚಿಸಿದನು.
ಚಡಪಡಿಸುತ್ತ ಆತ ತನ್ನ ಕಣ್ಣುಗಳನ್ನು ಮುಚ್ಚಿ
ಸಿಂಹದ ಎದುರಿಗೆ ಹೋಗತೊಡಗಿದನು. ತನ್ನ
ಅಂತ್ಯದ ಕ್ಷಣಕ್ಕಾಗಿ ಕಾಯತೊಡಗಿದನು.



ಒಮ್ಮೊಂದೊಮ್ಮೆಲೆ ಸಿಂಹದ ಗರ್ಜನೆ ನಿಂತುಬಿಟ್ಟಿತು.


ಸಿಂಹ ತನ್ನ ಕೈಯುಗುರುಗಳಿಂದ ಎಂಡ್ರೋಕ್ಲಿಸ್ ನ ಶರೀರವನ್ನು ಹರಿದು ಹಾಕಲಿಲ್ಲ. ಅದರ ಹಲ್ಲುಗಳು ಅವನ ಮೈಯಲ್ಲಿ ಸೇರಲಿಲ್ಲ. ಒಂದು ಒರಟಾದ, ಹಸಿಯಾದ ನಾಲಿಗೆ ಹೊರಬಂದು ಎಂಡ್ರೋಕ್ಲಿಸ್ ನ ತಲೆಯಿಂದ ಪಾದದ ವರೆಗೆ ನೆಕ್ಕತೊಡಗಿತು. ಅದು ಆ ಗವಿಯಲ್ಲಿಯ ಗೆಳೆಯನಾಗಿದ್ದ, ಸಿಂಹವಿತ್ತು.






“ಹುರ್ರೆ!" ನೆರೆದ ಜನಸಮೂಹ ಕೂಗತೊಡಗಿತು. “ಗುಲಾಮನ ಬಿಡುಗಡೆ ಮಾಡಿ. ಸಿಂಹವನ್ನು ಪಂಜರದ ಹೊರಗೆ ಬಿಡಿ.” ಎಂದು ಕೂಗ ತೊಡಗಿತು.

ಅರಸನು ಆಶ್ಚರ್ಯಚಕಿತನಾದನು. ಅರಸನು ಎಂಡ್ರೋಕ್ಲಿಸ್ ನನ್ನು ಮುಂದೆ ಕರೆದು ಅವನ ಕತೆಯನ್ನು ಕೇಳಿಕೊಂಡನು. “ಎಲ್ಲವು ಸರಿ ಇದೆ ಅರಸರೇ” ಎಂದು ಹೇಳಿ ತನ್ನ ಕತೆಯನ್ನು ಮುಂದುವರಿಸಿದನು. ಎಂಡ್ರೋಕ್ಲಿಸ್ ನ ಅಡವಿಯಲ್ಲಿಯ ಅನುಭವಗಳನ್ನು ಅರಸನು ಕಿವಿಗೊಟ್ಟು ಕೇಳಿದನು. ಅರಸನು ಎಂಡ್ರೋಕ್ಲಿಸ್ ಮತ್ತು ಆ ಸಿಂಹವನ್ನು ತನ್ನ ಬಂಧನನಿಂದ ಬಿಡುಗಡೆ ಮಾಡಿದನು.





ಅವರಿಬ್ಬರು ಮತ್ತೇ ಅಡವಿಯ
ದಾರಿಯನ್ನು ಹಿಡಿದರು.

ಮುಕ್ತಾಯ